ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ
ನವನಗರ, ಹುಬ್ಬಳ್ಳಿ – 580025
ದೂರವಾಣಿ ಸಂಖ್ಯೆ : 0836-2222392, ಫ್ಯಾಕ್ಸ್ : 0836-2223392

ಸಂಖ್ಯೆ: ಕರಾಕಾವಿ/ಆಡಳಿತ/2016-17/0717 ದಿನಾಂಕ: 19-07-2016

## ಅಧಿಸೂಚನೆ

ವಿಷಯ : ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕುಂದು-ಕೊರತೆ ನಿವಾರಣಾ ಸಮಿತಿ (SC/ST Students Welfare, Grievance Committee) ಯನ್ನು ರಚನೆ ಮಾಡುವ ಕುರಿತು.

ಉಲ್ಲೇಖ: 1. ದಿನಾಂಕ : 31-5-2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯ ನಡುವಳಿ (ವಿಷಯ ಸಂಖ್ಯೆ: 29)

2 ಮಾನ್ಯ ಕುಲಪತಿಗಳ ಪತ್ರದ ಸಂಖ್ಯೆ : KSLU/VCS/2016-17 ದಿನಾಂಕ : 11-7-2016.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಅಧಿನಿಯಮ-2009ರ ಕಲಂ 43 (read with Section 2 of the Statue governing power and function of SC/ST Students Welfare and Grievance Committee) ರನ್ವಯ ವಿಶ್ವವಿದ್ಯಾಲಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕುಂದು-ಕೊರತೆಗಳನ್ನು ನಿವಾರಿಸಲು **ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕುಂದು-ಕೊರತೆ ನಿವಾರಣಾ ಸಮಿತಿ (SC/ST Students Welfare, Grievance Committee)** ಯನ್ನು ಪುನರ್‌ರಚಿಸಲು ದಿನಾಂಕ : 31-5-2016ರಂದು ಜರುಗಿದ 51ನೇ ಸಿಂಡಿಕೇಟ್ ಸಭೆಯು ಉಲ್ಲೇಖ 1ರಡಿ ನಮೂದಿಸಿದ ನಡುವಳಿಯಲ್ಲಿ ಅನುಮೋದನೆಯನ್ನು ಪಡೆದುಕೊಳ್ಳಲಾಗಿದೆ. ಸದರ ಸಮಿತಿಗೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರನ್ನು ಗೊತ್ತುಮಾಡಲು ಮಾನ್ಯ ಕುಲಪತಿಗಳಿಗೆ ಸಿಂಡಿಕೇಟ್ ಸೂಚಿಸಿದಂತೆ ಮಾನ್ಯ ಕುಲಪತಿಗಳು ಉಲ್ಲೇಖ 2ರಡಿ ನಮೂದಿಸಿದ ತಮ್ಮ ಪತ್ರದಲ್ಲಿ ಸದಸ್ಯರುಗಳ ಹೆಸರನ್ನು ನಮೂದಿಸಿರುತ್ತಾರೆ. ಕಾರಣ ಮೇರೆಗೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕುಂದು-ಕೊರತೆ ನಿವಾರಣಾ ಸಮಿತಿ (SC/ST Students Welfare, Grievance Committee) ಯನ್ನು ಈ ಕೆಳಗಿನಂತೆ ಪುನರ್‌ರಚಿಸಿದೆ.

### ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಕುಂದು-ಕೊರತೆ ನಿವಾರಣಾ ಸಮಿತಿ
### (SC/ST Students Welfare, Grievance Committee)

| ಅ.ನಂ. | ಹೆಸರು | ಪದನಾಮ |
|---|---|---|
| 1. | ಶ್ರೀಮತಿ ಮರಿಚೆನ್ನಮ್ಮ, ಸಿಂಡಿಕೇಟ್ ಸದಸ್ಯರು | ಅಧ್ಯಕ್ಷರು |
| 2. | ಶ್ರೀಮತಿ ಎಮ್.ಎಸ್. ಸುಧಾದೇವಿ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 3. | ಶ್ರೀ ಸೂರಜ ಎಸ್. ನಾಯ್ಕ, ಸಿಂಡಿಕೇಟ್ ಸದಸ್ಯರು | ಸದಸ್ಯರು |
| 4. | ಶ್ರೀ ಅಮರನಾಥನ್ ಎಚ್. ಡಿ., ಪ್ರಶಿಕ್ಷಣ ಪರಿಷತ್ ಸದಸ್ಯರು | ಸದಸ್ಯರು |

| | | |
|---|---|---|
| 5. | ಕು. ಶಾರದಾ ಸಿಂಧೆ, ಸಹಾಯಕ ಪ್ರಾಧ್ಯಾಪಕರು (ವಿಶ್ವವಿದ್ಯಾಲಯದ ಮಹಿಳಾ ಬೋಧಕವರ್ಗ ಸದಸ್ಯರು) | ಸದಸ್ಯರು |
| 6. | ಜಿಲ್ಲಾ ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಧಿಕಾರಿಗಳು, ಧಾರವಾಡ | ಸದಸ್ಯರು |
| 7. | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಪರಿಶಿಷ್ಟ ಪಂಗಡ, ಧಾರವಾಡ | ಸದಸ್ಯರು |
| 8. | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಪರಿಶಿಷ್ಟ ಜಾತಿ, ಧಾರವಾಡ | ಸದಸ್ಯರು |
| 9. | ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿರ್ದೇಶಕರು | ಸದಸ್ಯ ಕಾರ್ಯದರ್ಶಿಗಳು |

ಸದರ ಸಮಿತಿಯು ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವುದು ಹಾಗೂ ಸಮಿತಿಯ ಕಾರ್ಯಾವಧಿಯು ಸಿಂಡಿಕೇಟ್ ಸಮಿತಿಯ ಕಾರ್ಯಾವಧಿಗೆ ಸಮಾನಾಂತರವಾಗಿರುತ್ತದೆ.

ತಮ್ಮ ವಿಶ್ವಾಸಿ,

19/04/16

ಕುಲಸಚಿವರು

ಗೆ,

ಸಮಿತಿಯ ಎಲ್ಲ ಸದಸ್ಯರಿಗೆ

ಪ್ರತಿಯನ್ನು,

1. ವಿಶ್ವವಿದ್ಯಾಲಯದ ಎಲ್ಲ ವಿಭಾಗದ ಮುಖ್ಯಸ್ಥರುಗಳಿಗೆ.
2. ಮುಖ್ಯಸ್ಥರು, ಐ.ಸಿ.ಟಿ. ವಿಭಾಗ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ ಇವರ ಮಾಹಿತಿಗಾಗಿ ಹಾಗೂ ವಿಷಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಅಳವಡಿಸಲು.
3. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.
4. ಆಪ್ತಕಾರ್ಯದರ್ಶಿಗಳು, ಮಾನ್ಯ ಕುಲಸಚಿವರ ಕಾರ್ಯಾಲಯ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ಹುಬ್ಬಳ್ಳಿ.